# ಎನ್‌ಐಟಿಕೆ: 50ನೇ ವಾರದ ಶ್ರಮದಾನ

**ಸುರತ್ಕಲ್, ಸೆ. 7:** ಎನ್‌ಐಟಿಕೆ ಸುರತ್ಕಲ್‌ನ ಜಂಟಿ ರಿಜಿಸ್ಟ್ರಾರ್ ಶ್ರೀ ರಾಮ್ ಮೋಹನ್ ಅವರ ನೇತೃತ್ವದ ಎನ್‌ಐಟಿಕೆ ಸೇವಾದಳವು ಸ್ವಚ್ಛ-ಭಾರತ ಅಭಿಯಾನದ ಭಾಗವಾಗಿ 49 ವಾರಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ, 50ನೇ ವಾರದ ಶ್ರಮದಾನವನ್ನು ಇತ್ತೀಚೆಗೆ ಆಚರಿಸಿತು.



ಎನ್‌ಐಟಿಕೆಯಿಂದ ಮಂಗಳೂರು ಮಹಾನಗರ ಪಾಲಿಕೆ, ಸುರತ್ಕಲ್ -1ರವರೆಗೆ ಸ್ವಚ್ಛತಾ ಜಾಗೃತಿ ಜಾಥಾ ನಡೆಯಿತು. ಪ್ಲಾಸ್ಟಿಕ್ ಮುಕ್ತ ಅಭಿಯಾನದ ವೇಳೆ ನಗರದಲ್ಲಿ ಸ್ವಚ್ಛತಾ ಜಾಗೃತಿ ಮೂಡಿಸಲು ಹಾಗೂ ಸ್ವಚ್ಛತೆ ಕಾಪಾಡಲು ಸಾರ್ವಜನಿಕರಿಗೆ ಕರಪತ್ರಗಳನ್ನು ವಿತರಿಸಿದ ತಂಡವು, ರಸ್ತೆಗಳಲ್ಲಿ ಸುರಿದಿರುವ ತ್ಯಾಜ್ಯವನ್ನು ಸ್ವಚ್ಛಗೊಳಿಸುವ ಮತ್ತು ಸಂಗ್ರಹಿಸುವ ಕಾರ್ಯದಲ್ಲಿ ತೊಡಗಿಸಿಕೊಂಡರು.

ಪ್ಲಾಸ್ಟಿಕ್ ಮುಕ್ತ ಅಭಿಯಾನವು ಸ್ವಚ್ಛತಾ ಪಖ್ವಾಡ ಒಂದು ಭಾಗವಾಗಿತ್ತು. ಸ್ವಚ್ಛತಾ ಪಖ್ವಾಡವು, ಶಿಕ್ಷಣ ಸಚಿವಾಲಯ, ಜಿಓಐನ ಉಪಕ್ರಮವಾಗಿದೆ. ಎನ್‌ಐಟಿಕೆ ಸುರತ್ಕಲ್‌ನ ವಿವಿಧ ವಿಭಾಗಗಳಲ್ಲಿ ಸ್ವಚ್ಛತಾ ಪಖ್ವಾಡ ಚಟುವಟಿಕೆಗಳನ್ನು ಯೋಜಿಸಲಾಗಿದೆ.

ಈ ಕಾರ್ಯಕ್ರಮವು ಸೆ.1ರಿಂದ ಸೆ.15ರವರೆಗೆ ನಡೆಯಲಿದೆ. ಕಾರ್ಯಕ್ರಮದಲ್ಲಿ ಎನ್‌ಐಟಿಕೆ ಪ್ರಭಾರ ನಿರ್ದೇಶಕರು, ರಿಜಿಸ್ಟ್ರಾರ್ , ಜಂಟಿ ರಿಜಿಸ್ಟ್ರಾರ್ , ಎನ್‌ಸಿಸಿ ಅಧಿಕಾರಿಗಳು, ಎನ್ ಎಸ್ ಎಸ್ ಕಾರ್ಯಕ್ರಮ ಅಧಿಕಾರಿಗಳು, ಎನ್‌ಸಿಸಿ ಕೆಡೆಟ್‌ಗಳು, ಬೋಧಕ ಮತ್ತು ಬೋಧಕೇತರ ಸಿಬಂದಿ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

Udayavani, Date: 08/09/22, P. No, 02